ಕೋರಿರುತ್ತಾರೆ. ಇದರಂತೆ ರೂ 36 ಸಾವಿರಗಳ ಅಂದಾಜು ಸಿದ್ದಪಡಿಸಲಾಗಿದೆ. ಮಂಡಲಪಂಚಾಯ್ತಿಯವರು ರೂ 15 ಸಾವಿರಗಳನ್ನು ಪಾವತಿ ಮಾಡಿರುತ್ತಾರೆ. ಬಾಕಿ ಉಳಿದ 21 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡುವಂತೆ ಮಂಡ್ಯ ಜಿಲ್ಲಾಧಿಕಾರಿಯವರನ್ನು ಕೋರಲಾಗಿದೆ. ಈ ಹಣ ದೊರತ ಕೂಡಲೆ ಹೆಚ್ಚು ಇಳುವರಿ ಇರುವ ಕೊಳವೆ ಬಾವಿಗೆ ವಿದ್ಯುತ್ ಪಂಪುಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು.

ಈ ಪಟ್ಟಣಕ್ಕೆ ಕುಡಿಯುವ ನೀರಿನ ಬವಣೆಯನ್ನು ನಿವಾರಿಸಲು ರೂ. 7.50 ಲಕ್ಷಗಳ ಅಂದಾಜು ಮೊತ್ತದಲ್ಲಿ ಅಭಿವೃದ್ದಿ ಯೋಜನೆಯನ್ನು ತಯಾರಿಸಲಾಗಿದೆ. ಸದರಿ ಯೋಜನೆಯನ್ನು ಯೋಜನಾ ವೆಚ್ಚದಲ್ಲಿ ಕೈಗೆತ್ತಿಕೊಳ್ಳುವಂತೆ ಸರ್ಕಾರವು ಜಿಲ್ಲಾಪರಿಷತ್ತಿಗೆ (ಸರ್ಕಾರದ ಪತ್ರ ಸಂಖ್ಯೆ ಆರ್‌ಡಿಪಿ 338 ಆರ್‌ಡಬ್ಲ್ಯುಎಸ್ (2) 90, ದಿನಾಂಕ : 22.2.91) ಆದೇಶ ನೀಡಿದೆ. ಇದರಂತೆ, ಈ ಯೋಜನೆಯನ್ನು 1991-92 ಅನುಬಂಧ-ಇ ನಲ್ಲಿ ಸೇರಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ಈ ಯೋಜನೆಯಲ್ಲಿ ಅಗತ್ಯವಾದ 7 ಕೊಳವೆ ಭಾವಿಗಳನ್ನು ಕೊರೆದು ಅವುಗಳಿಗೆ ವಿದ್ಯುತ್ ಪಂಪು ಅಳವಡಿಸುವ ಕಾರ್ಯ, ಸಂಪರ್ಕಕೊಳವೆ ಮಾರ್ಗಗಳು, ಹಾಗೂ ಒಂದು ಲಕ್ಷ ಲೀಟರ್‌ನ ಮೇಲ್ಮಟ್ಟದ ಜಲಸಂಗ್ರಹಗಾರವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಬೆಳ್ಳೂರು ಪಟ್ಟಣ

ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಪೆಟ್ಟಣವು 1986ರಲ್ಲಿ ಮಂಡಲವಾಗಿ ಪರಿವರ್ತಿತಗೊಂಡಿದೆ. ಈ ಪಟ್ಟಣದ ಜನಸಂಖೆ 1981ರ ಜನಗಣತಿಯ ಪ್ರಕಾರ 5438 ಇದ್ದು ಹಾಲಿ ಜನಸಂಖ್ಯೆ ಸುಮಾರು 6,500 ಇರುತ್ತದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು 1979ರಲ್ಲಿ ಮಂಜೂರಾದ ರೂ 7.75 ಲಕ್ಷಗಳ ಅಂದಾಜಿನ ಅಭಿವೃದ್ದಿ ಯೋಜನೆಯನ್ನು ಪೂರ್ಣಗೊಳಿಸಿದೆ. ಈ ಯೋಜನೆ ಅಡಿಯಲ್ಲಿ 4 ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪು ಅಳವಡಿಸಿದೆ. 2 ಲಕ್ಷ ಸಾಮರ್ಥ್ಯದ ಮೇಲ್ಬಟ್ಟ ಜಲಸಂಗ್ರಹಾಗಾರಗಳನ್ನು, ನಿರ್ಮಿಸಿ ಅಲ್ಲಿಂದ ವಿತರಣ ಕೊಳವೆಗಳ ಮೂಲಕ ನೀರನ್ನು ಪೂರೈಸಲಾಗುತ್ತಿದೆ.

ಕುಡಿಯುವ ನೀರಿನ ನಿರ್ವಹಣೆಯನ್ನು ಮಂಡಲ ಪಂಚಾಯಿತಿಯವರೆ ನಡೆಸಿಕೊಂಡು ಹೇಗುತ್ತಿದ್ದಾರೆ. ಪ್ರಸಕ್ತ ಸಾಲಿನ ಅಭಾವ ಪರಿಹಾರ ಕಾರ್ಯಕ್ರಮದಲ್ಲಿ 3 ಕೊಳವೆ ಬಾವಿಗಳನ್ನು ಕೊರೆದು ಕೈಪಂಪು ಜೋಡಿಸಲಾಗಿದೆ.

ಇದಲ್ಲದೆ, ಸದರಿ ಪಟ್ಟಣಕ್ಕೆ ಕುಡಿಯುವ ನೀರು ಅಭಿವೃದ್ದಿ ಪಡಿಸುವ ರೂ. 1.50 ಲಕ್ಷಗಳ ಅಂದಾಜಿನ ಪ್ರಸ್ತಾವನೆಯನ್ನು 1991-92ರ ಅನುಬಂಧ-ಇನಲ್ಲಿ ಸೇರಿಸಿ, ಸದರಿ ಪಟ್ಟಣದ ಕುಡಿಯುವ ನೀರಿನ ಪರಿಸ್ಥಿತಿಯನ್ನು ಸುಧಾರಿಸಲು ಉದ್ದೇಶಿಸಲಾಗಿದೆ.

2) ಬೀದರ್ ಜಿಲ್ಲೆಯ ಕಾರಂಜಾ ನೀರಾವರಿ ಯೋಜನೆಯಲ್ಲಿ ಆಸ್ತಿ ಕಳೆದುಕೊಂಡ ನಿರುದ್ಯೋಗಿಗಳಿಗೆ ನೇಮಕಾತಿಯಲ್ಲಿ ಆದ್ಯತೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಭಾದ್ಯಕ್ಷರೇ, ಬೀದರ್ ಜಿಲ್ಲೆಯ ಕಾರಂಜಾ ನೀರಾವರಿ ಯೋಜನೆಯಲ್ಲಿ ಆಸ್ತಿ ಕಳೆದುಕೊಂಡ ನಿರುದ್ಯೋಗಿಗಳಿಗೆ ಸರ್ಕಾರ ನೀಡಿದ 1987ರ ಆಶ್ವಾಸನೆಯಂತೆ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಆಧ್ಯತೆ ನೀಡದೆ ಅನ್ಯಾಯವಾಗಿರುತ್ತದೆ. ಈ ಬಗ್ಗೆ ನ್ಯಾಯ ದೊರಕಿಸಿಕೊಡುವಿರಾ? ಮತ್ತು ಸತ್ಯಾಗ್ರಹ ಮಾಡಿದ 15ಜನ ನಿರುದ್ಯೋಗಿಗಳನ್ನು ಶಿಕ್ಷಕರ ಹುದ್ದೆಗೆ ಗುತ್ತಿಗೆ ಅಥವಾ ದಿನಗೂಲಿ ಆಧಾರದ ಮೇಲೆ ತಕ್ಷಣವೇ ನೇಮಿಸಿಕೊಳ್ಳುವಿರಾ? ಜಿಲ್ಲಾ

ಮಟ್ಟದ ಎಲ್ಲಾ ನೇಮಕಾತಿಗಳಲ್ಲಿ ಇನ್ನು ಮುಂದಾದರೂ ಆದ್ಯತೆ ಮೇರೆಗೆ ಮುಳುಗಡೆ ಪ್ರದೇಶದ ನಿರುದ್ಯೋಗಿಗಳನ್ನು ಕೂಡಲೇ ನೇಮಿಸಿಕೊಳ್ಳುವಿರಾ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಕಾರಂಜಾ ಯೋಜನೆಯಲ್ಲಿ ಮುಳುಗಡೆಯಾದ ಹಳ್ಳಿಗಳ ನಿರುದ್ಯೋಗಿಯುವಕರು ಮೇಲಿಂದ ಮೇಲೆ ಸರ್ಕಾರಿ ನೌಕರಿಯನ್ನು ಆದ್ಯತೆ ಮೇರೆಗೆ ಕೊಡಲು ಕೇಳುತ್ತಲಿದ್ದಾರೆ. ಕೆಲವು ಯುವಕರಿಗೆ ಇಂಟರ್‌ವಿಗೆ ಬಂದಾಗ ಮುಖ್ಯ ಇಂಜನಿಯರ್ ನೀರಾವರಿ ಯೋಜನಾ ವಲಯ ಗುಲ್ಬರ್ಗ ಹಾಗೂ ಕಾರಂಜಾ ಭೂಸ್ವಾಧೀನಾಧಿಕಾರಿಯವರಿಂದ ಮನೆ ಮತ್ತು ಹೊಲಗಳು ಮುಳುಗಡೆಯಾದ ಬಗ್ಗೆ ಪ್ರಮಾಣ ಪತ್ರವನ್ನು ಕೊಡುವುದರ ರೂಢಿಯಲ್ಲಿದೆ.

ದಿನಾಂಕ 11-1-91ರಂದು ಮುಳುಗಡೆ ಪ್ರದೇಶದ ನಿರುದ್ಯೋಗಿಗಳ ಜಿಲ್ಲಾಧಿಕಾರಿಯವರ ಕಚೇರಿಯ ಎದುರುಗಡೆ ತಮ್ಮ ಬೇಡಿಕೆಗಳ ಬಗ್ಗೆ ಸತ್ಯಾಗ್ರಹ ಹೂಡಿದ್ದರು. ಮಾನ್ಯ ಕಂದಾಯ ಮಂತ್ರಿಯವರು ಕೆ.ಡಿ.ಪಿ ಸಭೆಯನ್ನು ಮುಗಿಸಿಕೊಂಡು ಬರುವಾಗ ಮೇಲ್ಕಾಣಿಸಿದ ಸಿಂದಬಂದಗಿ ಗ್ರಾಮ ಸಮಿತಿಯ ನಿರುದ್ಯೋಗಿ ಯುವಕರು ಉದ್ಯೋಗ ಒದಗಿಸಬೇಕೆಂದು ತಮ್ಮ ಬೇಡಿಕೆಯನ್ನು ಮುಂದಿಟ್ಟಾಗ ಮಾನ್ಯ ಮುಖ್ಯಮಂತ್ರಿಗಳು ಈ ವಿಶೇಷ ಸೌಲಭ್ಯ ನೀಡಲು ಕಾನೂನಿನ ಚೌಕಟ್ಟಿನಲ್ಲಿ ಸಾಧ್ಯವಿಲ್ಲವೆಂದು ತಿಳಿಸಿದರು.

ದಿನಾಂಕ 22-2-88ರಂದು ನಡೆದ ಪುನರ್ ವಸತಿ ಸಭೆಯ ನಡವಳಿಕೆಯ ಪ್ರಕಾರ ಯಾರು ಹೊಲ ಮನೆ ಪೂರ್ತಿಯಾಗಿ ಕಾರಂಜಾ ಯೋಜನೆಯ ಜಲಾಶಯದಲ್ಲಿ ಕಳೆದುಕೊಂಡಿದ್ದಾರೋ ಅಂಥಹವರೂ ತಮ್ಮ ತಮ್ಮ ಹೆಸರನ್ನು ಎಂಪ್ಲಾಯಿಮೆಂಟ್ ಎಕ್ಷೇಂಜ್ ಬೀದರ್‌ನಲ್ಲಿ ನೋಂದಾಯಿಸಿಬೇಕು ಮತ್ತು ಅಂಥಹವರ ಯಾದಿಯನ್ನು ಗ್ರಾಮಸ್ಥರೇ ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು ಕಾರಂಜಾ ಯೋಜನೆ ಪುನರ್ ವಸತಿಯ ಸಮಿತಿ ಬೀದರ್ ಇವರಿಗೆ ಸಲ್ಲಿಸಬೇಕೆಂದು ನಿರ್ದರಿಸಲಾಯಿತು. ನಂತರ ಅಧ್ಯಕ್ಷರು ಸರ್ಕಾರಕ್ಕೆ ಈ ವಿಷಯವಾಗಿ ಪತ್ರ ಬರೆಯುವುದಾಗಿ ತಿಳಿಸಿದ್ದರು. ಆದರೆ ಈವರೆಗೆ ಯಾವ ಯಾದಿಯೂ ಗ್ರಾಮಸ್ಥರ ಕಡೆಯಿಂದ ಬಂದಿರುವ ಬಗ್ಗೆ ವರದಿ ಇಲ್ಲ.

ಸರ್ಕಾರಿ ಆದೇಶದ ಅದಿಸೂಚನೆ ಸಂಖ್ಯೆ ಇಡಿ 25 ಎಸ್‌ಎಂ 90 ದಿನಾಂಕ 20-12-90ರ ಅಡಿಯಲ್ಲಿ ವಿಶೇಷ ನಿಯಮಾವಳಿಯನ್ನು ರೂಪಿಸಿ ದಿನಾಂಕ 11-1-91ರೊಳಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಎಸ್‌ಎಸಎಲ್‌ಸಿ ಮತ್ತು ಟಿಸಿಹೆಚ್ ಅರ್ಹತೆ ಹೊಂದಿರುವ ನೋಂದಾಯಿಸಿದ ಅಭ್ಯರ್ಥಿಗಳ ಪಟ್ಟಿಯಂತೆ ನಿಯಮಾನುಸಾರಿ ಜಿಲ್ಲಾ ಉಪನಿರ್ದೇಶಕರು, ಬೀದರ್ ಜಿಲ್ಲೆಯವರು ದಿನಾಂಕ 1-3-90ರಲ್ಲಿದ್ದಂತೆ ಇದ್ದ ಖಾಲಿ 62 ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಅಭ್ಯರ್ಥಿಗಳನ್ನು ಆಯ್ಕೆ ಪಟ್ಟಿಯನ್ನು ಪ್ರಕಟಿಸಿರುತ್ತಾರೆ. ಈಗ ನಿರ್ಗತಿಕರಿಗೆ ಆದ್ಯತೆ ನೀಡಿ ನೇಮಕಾತಿ ಮಾಡಲು ಯಾವ ನಿಯಮಗಳು ಇರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಈಗಾಗಲೇ ಪುನರ್ವಸತಿಯಾಗಿರತಕ್ಕ ವರಾಹಿ ಪ್ರಾಜೆಕ್ಟ್ ಮತ್ತು ಶರಾವತಿ ಪ್ರಾಜೆಕ್ಟ್‌ಗಳಿಗೆ ಪೂರಕವಾಗಿ ಅವರಿಗೆ ಅನುಕೂಲವಾಗುವ ವಿಷಯದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಈ ಯೋಜನೆಗೋಸ್ಕರ ಯಾರುಯಾರು ಹೊಲಗಳನ್ನು, ಭೂಮಿಯನ್ನು ಕಳೆದುಕೊಂಡಿದ್ದಾರೋ ಅಂಥವರ ಕುಟುಂಬದ ಹುಡುಗ ಮತ್ತು ಹುಡುಗಿಯರಿಬ್ಬರಿಗೂ ಆದ್ಯತೆಯ ಮೇಲೆ ಕೆಲಸವನ್ನು ಕೊಡಲು ಕಾನೂನನ್ನು ರಿಲ್ಯಾಕ್ಸ್ ಮಾಡಲು ಸರ್ಕಾರ ಮೂಲಭೂತವಾಗಿ ಒಪ್ಪಿದೆ. ಅವರಿಗೆ ಈ ಯೋಜನೆಯ ಅಡಿಯಲ್ಲಿ ಆದ್ಯತೆಯನ್ನು ಕೊಟ್ಟು ಅದನ್ನು ಈಗಲೇ ಜಾರಿ ಮಾಡುತ್ತೇವೆ. ಕಾರಂಜಾ ಯೋಜನೆಯ ವಿಚಾರದಲ್ಲಿಯೂ ಕೂಡ ಇದೇ ರೀತಿ ಮಾಡುತ್ತೇವೆ.